ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರಿನಲ್ಲಿರುವ ನೆ೦ಸೂರು ಡಿಸ್ಟ್ರಿಕ್ಟ್ ಆಬ್ಕಾರಿ ಶಿರಸ್ತೇದಾರ ಶಂಖರಯ್ಯನ ವಿಷಯದಲ್ಲಿ—

ಸ್ರ 1890ನೇ ಇಸವಿ ದಿವಾಳೀ ಕೇಸ್ ನಂಬರ್ 410.

ಹುಕ್ಕುಂ.

ಮೇಲ್ಕಂಡ ಶಂಖರಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟುರೂಬರೂ ಅರ್ಜೀದಾರನಾದ ಶೆಂಖರಯ್ಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ಸುಬ್ಬರಾಯರನ್ನು ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ವರ್ಧಮಾನ ಪಂಡಿತ, 2ನೇ ನರಸಿಂಗ, 14ನೇ ಮೈಸೂರು ಜರ್ಗಮೊಹನ ಬ್ಯಾಂಕು, 11ನೇ ಧನಾವೃದ್ಧಿ ಬ್ಯಾಂಕು, 18ನೇ ಲಕ್ಷ್ಮಣಾಯರ ಕಡೆ ವೆಂಕೋಬರಾಯರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರೆಂದರೆ—3ನೇ ಚಿಕ್ಕ ಪಾಪಂಣ, 4ನೇ ಮೇಡಪ್ಪ. 5ನೇ ಹರಿ ಶೆಂಖರಭಟ್ಟ, 6ನೇ ಅಹೋಬಲಶಾಸ್ತ್ರಿ, 7ನೇ ವೆಂಕಟನಾರಣಪ್ಪ, 8ನೇ 9ನೇ ನಾರಣದಾಸ್ ಕೇಟೆ 10ನೇ ಜವಳಿ ಬ್ಯಾಂಕು, 12ನೇ ಸರ್ವದನ ವೃದ್ದಿಬ್ಯಾಂಕು, 13ನೇ ರಾಜಧಾನಿ ಬ್ಯಾಂಕು, 15ನೇ ಲೈಫ್ ಇನ್‌ಫಿರಿಯಲ್ ಬ್ಯಾಂಕು, 16ನೇ ಸುಬ್ಬಮ್ಮ 17ನೇ ವೆಂಕಟರಮಣಯ್ಯ 19ನೇ ಲಕ್ಷ್ಮಿಪತಯ್ಯ 20ನೇ ಭವಾಂಣ 21ನೇ ಪಾಂಜಿ ಕೇಟೆ 22ನೇ ಲಕ್ಷ್ಮಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಶೆಂಖರಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸ್ರ 1890ನೇ ಇಸವಿ ಸೆಪ್ಟೆಂಬರ್ 8ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತುನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಸಾಲದ ಮೊಬಲಗು.	ಯಾವಾಗ ದೇಣಿ ಹುಟ್ಟಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಬೆಂಗಳೂರಲ್ಲಿರುವ ಚಿಕ್ಕ ಶಾಮಬಾರಿಮಗ ನರಸಿಂಗ ..	38—8—3	..	ಡಿಕರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜಿ.

ನೋಟಿಫಿಕೇಷನ್

1ನೇ ಸೆಪ್ಟೆಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮಾರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು ಈ ಆನೆಯನ್ನು ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ. ಅಡಿ.	ಅಂಗಲ	ಹಿಡಿಯಲ್ಪಟ್ಟ ತಾರೀಖು.
ಕಲ್ಯಾಣಿ	ಹೆಣ್ಣು	7	4	28—6—86

ಷರಾ.—ಈ ಆನೆಯು ಚೆನ್ನಾಗಿ ಚೆನ್ನಾಗಿ ತಯಾರ್ಮಾಡಲ್ಪಟ್ಟಿದೆ ಮತ್ತು ಪೊಳ್ಳೆ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿ ಲಾಗಾಯ್ತು ಹೊಸ ಆನೆಗಳನ್ನು ತಯಾರ್ಮಾಡಲು ಪ್ರಯೋಗಿಸಲ್ಪಡುತ್ತಾ ಇದೆ.

ತಾರೀಖು 6ನೇ ಸೆಪ್ಟಂಬರ್ 1890ನೇ ಇಸವಿ.

ಇದರಡೀ ಕಂಡ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ಸುಗಳಿಂದ ಮೈಸೂರು ಟೌರ್ವಗೆ ಇದರ ಕೆಳಗೆ ನಮೂದಿಸಿರುವ ತಪಸೀಲ್ ಮೇರಿಗೆ ರೈಲ್ವೆ ಸ್ಲೀಪರುಗಳಿಗಾಗಿ ತೇಗದ ಉಂಡೆ ದಿಮ್ಮಿಗಳನ್ನ ಲದಾಯಿ ಮಾಡಲು ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಟ್ಟಿವೆ.

ತಾಲ್ಲೂಕು.	ಫಾರೆಸ್ಟ್.	ಸುಮಾರು ಅದದು	ಸಲೆ ಅಡಿ.
ಹೆಗ್ಗಡದೇವನಕೋಟೆ	ಕಾಕನಕೋಟೆ	2200	22000
	ಮೇಟಿಕುಪ್ಪೆ	1500	15000
	ಬೇಗೂರು	2500	25000
	ಐನೂರು ಮಾರಿಗುಡಿ	2500	25000
ಗುಂಡ್ಲು ಪೇಟೆ	ಬೇರಂಬಾಡಿ	500	5000
	ಭಂಡೀಪುರ	300	3000
ಹುಣಸೂರು	ವೀರನ ಹೊಸಹಳ್ಳಿ	200	2000
	ದೊಡ್ಡ ಹರವೆ	150	1500
	ಮಾವಕಲ್ ಲಿಂಗಾಪುರ ಅನೆ ಚವ್ಕುಕೂರು ಬಾಣಾರೆ	150	1500

2. ದರಖಾಸ್ತುದಾರರು ಬಂದೇ ಫಾರೆಸ್ಟ್ಸಿಗಾಗಲಿ ಅಥವಾ ಬಂದು ತಾಲ್ಲೂಕಿನಲ್ಲಿರುವ ಎಲ್ಲಾ ಫಾರೆಸ್ಟ್ಸುಗಳಿಗೆ ಆಗಲಿ ಅಥವಾ ಮೇಲೆ ನಮೂದಿಸಿರುವ ಎಲ್ಲಾ ಫಾರೆಸ್ಟ್ಸುಗಳಿಗಾಗಲಿ ದರಖಾಸ್ತುಗಳನ್ನು ಕಳುಹಿಸಬಹುದು.

3. ದರಖಾಸ್ತುಗಳು "ಮೈಸೂರಿಗೆ ತೇಗದ ಉಂಡೇಮರಗಳನ್ನು ಸಾಗಿಸುವ ಬಗ್ಗೆ ದರಖಾಸ್ತು" ಎಂಬದಾಗಿ ವಿಳಾಸ ಬರಿಯಲ್ಪಡತಕ್ಕದ್ದು. ಮತ್ತು ದರಖಾಸ್ತಿನೊಡನೆ 200 ರೂಪಾಯಿಗಳ ಬೆಲೆಯುಳ್ಳ ಕರ್ಣಿಸಿ ನೋಟುಗಳನ್ನ ಕಳುಹಿಸಬೇಕು. ಟೆಂಡರುಗಳ ತನಿಖೆ ಮಾಡಿದನಂತರ ಯಿವು ವಾಪಸ್ ಮಾಡಲ್ಪಡುವವು.

4. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರವರಿಂದ ಈ ಮಾಹೆ ತಾರೀಖು 20ರ ವರಿವಿಗೆ ತೆಗದುಕೊಳ್ಳಲ್ಪಡುವವು.

5. ದರಖಾಸ್ತುದಾರರು ಮೇಟಿಕಂಡ ಫಾರೆಸ್ಟ್ಸುಗಳಿಂದ ಮೈಸೂರಿಗೆ ಸಾಗಿಸುವ ಬಗ್ಗೆ ದರ ಸಲೆ ಅಡಿ ಬಂದಕ್ಕೆ ತಾವು ಒಪ್ಪಿಕೊಳ್ಳುವ ಕಮ್ಮಿ ದರವನ್ನು ನಮೂದಿಸತಕ್ಕದ್ದು.

6. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರನು ತನ್ನ ಕಂಟ್ರಾಕ್ಟ್ ಪ್ರಕಾರ ಸರಿಯಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರೀಕ್ ಕಾಕನಕೋಟೆ, ಮೇಟಿಕುಪ್ಪೆ, ಬೇಗೂರು, ಐನೂರ ಮಾರಿಗುಡಿ, ಫಾರೆಸ್ಟ್ಸುಗಳಿಗೆ ಪ್ರತಿ ಬಂದಕ್ಕೆ ಇನ್ನೂರು ರೂಪಾಯಿಗಳ ಮೇರಿಗೂ, ಬೇರಂಬಾಡಿ, ಭಂಡೀಪುರ ಫಾರೆಸ್ಟ್ಸುಗಳಿಗೆ ಪ್ರತಿ ಬಂದಕ್ಕೆ ಬಂದು ನೂರು ರೂಪಾಯಿಗಳ ಮೊಬಲಗೂ, ವೀರನ ಹೊಸಹಳ್ಳಿ, ದೊಡ್ಡ ಹರವೆ ಮತ್ತು ಮಾವಕಲ್ ವಗೈರೆ ಫಾರೆಸ್ಟ್ಸುಗಳಿಗೆ ಪ್ರತಿ ಬಂದಕ್ಕೆ ಐವತ್ತು ರೂಪಾಯಿಗಳ ಮೇರೆಗೂ ಠೇವಣಿ ಯಿಡತಕ್ಕದ್ದು.

7. ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೂಲಕ ಕತರಾಯಿ ಕೆಲಸವು ನಡಿಯುವಾಗಲೇ ಲದಾಯಿ ಕೆಲಸವು ನಡಿಯಬೇಕು. ಮತ್ತು ಯಾವ ತುಂಡುಗಳೇ ಆಗಲಿ ನಷ್ಟವಾಗದಂತೆ ನಡಿಸಲ್ಪಡಬೇಕು. ಕತರಾಯಿಸುವ ಕಾಲದಲ್ಲಿ ಕಂಟ್ರಾಕ್ಟ್‌ದಾರನ ತರಫ಼ ಒಬ್ಬ ಪುತ್ಸದ್ದಿಯು ಪ್ರತಿ ಫಾರೆಸ್ಟಿನಲ್ಲಿಯೂ ಹಾಜರ್ ಯಿರತಕ್ಕದ್ದು. ಪ್ರತಿ ತಿಂಗಳಲ್ಲಿಯೂ ಪ್ರತಿ ಫಾರೆಸ್ಟಿನಿಂದ ಅದರ ಬಾಜೂದಲ್ಲಿ ನಮೂದಿಸಿರುವ ಮೊತ್ತದಲ್ಲಿ ಐದರಲ್ಲಿ ಒಂದು ಭಾಗಕ್ಕೆ ಕಮ್ಮಿ ಯಿಲ್ಲದಂತೆ ಸಾಗಿಸಲ್ಪಡತಕ್ಕದ್ದು.

8. ಅಸಿಸ್ಟೆಂಟ್ ಕ್ಯಸರವೇಟರವರು ಕಮ್ಮಿದರದ ದರಖಾಸ್ತು ಅಥವಾ ಯಾವ ಇತರ ದರಖಾಸ್ತನ್ನಾದರೂ ಅಂಗೀಕರಿಸುವಕ್ಕೆ ಬದ್ಧರಾಗಿರುವದಿಲ್ಲ, ದರಖಾಸ್ತುಗಳ ಮಂಜೂರಾತಿಯು ಡೆಪ್ಯೂಟಿ ಕಮ್ಮಿಷನರು ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

9. ದರಖಾಸ್ತು ಮಾಡಲು ಇಚ್ಛೈಸುವ ಕಂಟ್ರಾಕ್ಟ್‌ದಾರನು ಇನ್ನು ಅವಶ್ಯಕವಾದ ತಪಸೀಲುಗಳನ್ನು ನಮ್ಮ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಬಿ. ರಾಮಸ್ವಾಮಿ ಐಯ್ಯರ್,
ಅಸಿಸ್ಟೆಂಟ್ ಕ್ಯಸರವೇಟರ್ ಆಫ಼ ಮೈಸೂರ್.

ಗೈರ ವಿಲಾತಿವಾದ ಕರ್ಣಿಸಿ ನೋಟ್.

ಸರ್ಕಲ್.	ನಂಬರ್.	ಕ್ರಯ.	ಷರಾ--ಮೈಸೂರು ಡಿಸ್ಟ್ರಿಕ್ಟ್ ಫ್ರೈಜ್‌ರಾಕ್ಸ್ ಸಬ್ ಡಿವೀಜ್ ಆಫೀಸ್ ರಿಕಾರ್ಡ್ ಕೀಪರ್ ವ್ಯಾಸರಾಯರ ಮನೆಯಲ್ಲಿ ಕಳವಾದಂತೆ ತಿಳಿಯಬರುತ್ತೆ.
ಮದರಾಸ್	T. 19–66830	100	